# ಎರಡು ಹಿಂದಿ ಕಥೆಗಳು

■ ಕನ್ನಡಕ್ಕೆ: **ಎಚ್.ಎಂ. ಕುಮಾರಸ್ವಾಮಿ**
ಕಲೆ: ಎಸ್.ವಿ. ಹೂಗಾರ್



## ಶರಾಬು

■ ಮೂಲ: **ಶಕ್ತಿಮೋಹನ್ ಶ್ರೀಮಾಲಿ**

ಆ ಹಳ್ಳಿಯ ಹೆಂಗಸಿನ ಹೆಸರು ರೂಪಾಲಿ. ಇಂದು ರೂಪಾಲಿಯ ಹೆಸರಿಗೆ ಒಂದು ಕಾಗದ ಬಂದಿದೆ ಎಷ್ಟೋ ವರ್ಷಗಳ ನಂತರ. ಯಾರು ಕಳುಹಿಸಿರಬಹುದು? ಎಲ್ಲಿಂದ ಬಂದಿರಬಹುದು? ನನಗೆ ಪತ್ರ ಬರೆಯುವವರು ಯಾರು ತಾನೇ ಇದ್ದಾರೆ..? ಹೀಗೆ ಅನೇಕ ಪ್ರಶ್ನೆಗಳು ಮನದಲ್ಲಿ ಮೂಡಿದವು. ಒಂದು ಕ್ಷಣ ಯೋಚಿಸಿ, ನಂತರ ಕುತೂಹಲ ತಡೆಯಲಾರದೆ ಆ ಕಾಗದವನ್ನು ತೆರೆದು ಓದಿದಳು. ಆಕೆಯ ಸಂತೋಷಕ್ಕೆ ಪಾರವೇ ಇಲ್ಲದಾಯಿತು. ಇಂದು ಸಂಜೆಯ ಗಾಡಿಗೆ ಆಕೆಯ ಗಂಡ ಹಿಂತಿರುಗಿ ಬರುತ್ತಿರುವುದಾಗಿ ತಿಳಿಸಿದ್ದ.

ಇದೆಲ್ಲ ಏನು? ಎಂದು ಆಕೆಗೆ ಅರ್ಥವೇ ಆಗುತ್ತಿರಲಿಲ್ಲ. ಇದ್ದಕ್ಕಿದ್ದ ಹಾಗೆ ಆತನಿಗೆ ನನ್ನ ನೆನಪಾದರೂ ಹೇಗೆ ಬಂತು? ಎಷ್ಟೋ ವರ್ಷಗಳ ಹಿಂದೆ ನನ್ನ ಜೊತೆ ಕೋಪಗೊಂಡು ನನ್ನನ್ನು ಬಿಟ್ಟುಹೋಗಿದ್ದ. ನಿತ್ಯ ಜಗಳವಾಡುತ್ತಿದ್ದ. ಜಗಳವಾದರೂ ಏತಕ್ಕೆ? ಶರಾಬಿಗಾಗಿ. ಪ್ರತಿದಿನ ಆತ ಶರಾಬು ಕುಡಿಯುತ್ತಿದ್ದ. ನನ್ನನ್ನು ಕುಡಿಯುವಂತೆ ಪ್ರತಿನಿತ್ಯ ಒತ್ತಾಯಿಸುತ್ತಿದ್ದ. ನಾನು ನಿರಾಕರಿಸುತ್ತಲೇ ಇದ್ದೆ. ಹಾಗಾಗಿ ಪ್ರತಿದಿನ ಹೊಡೆಯುವುದು, ಹಿಂಸೆ ನೀಡುವುದು ಮಾಮೂಲಿಯಾಗಿಬಿಟ್ಟಿತ್ತು. ಆತ ಬಹಳ ಹಟಮಾರಿಯಾಗಿದ್ದ.

ಆ ದಿನವೂ ಆತ ನನ್ನನ್ನು ಕುಡಿಯುವಂತೆ ಬಹುವಾಗಿ ಒತ್ತಾಯಿಸಿದ. ನಾನು ಖಡಾಖಂಡಿತವಾಗಿ ತಿರಸ್ಕರಿಸಿದಾಗ ಮನಸೋಇಚ್ಛೆ ನನ್ನನ್ನು ಥಳಿಸಿದ. ನಾನು ಸುಸ್ತಾಗಿ ಅಳಲೂ ಆಗದೆ ಬಿಕ್ಕಳಿಸುತ್ತ ಮಂಡಿಗಳ ಮಧ್ಯೆ ತಲೆ ಹುದುಗಿಸಿಕೊಂಡು ಕುಳಿತುಬಿಟ್ಟೆ. ಆತ ಕಾಲು ಜಾಡಿಸಿ ಒದ್ದು ಪಕ್ಕದ ಕೋಣೆಗೆ ಹೊರಟುಹೋದ. ನೋವು, ಹಸಿವಿನಿಂದಾಗಿ ನಿದ್ರೆ ಹತ್ತಿದ್ದು ನನ್ನ ಗಮನಕ್ಕೆ ಬರಲೇ ಇಲ್ಲ.

ಬೆಳಿಗ್ಗೆ ಎದ್ದು ನೋಡಿದಾಗ ಆತ ಎಲ್ಲಿಯೂ ಕಾಣಿಸಲಿಲ್ಲ. ಪರಿಚಯವಿರುವ ಕಡೆ ಹುಡುಕಿದರೂ ಸಿಗಲಿಲ್ಲ. ಏನೂ ತೋಚದೆ ಆತನ ಬರುವಿಕೆಯ ನಿರೀಕ್ಷೆ ಹೊತ್ತು ಕುಳಿತಿರುವುದಷ್ಟೇ ರೂಪಾಲಿಯ ಪಾಲಿಗೆ ಉಳಿಯಿತು. ವರ್ಷಗಳು ಉರುಳಿದವು.

ಇಂದು ಗಂಡ ಬರುತ್ತಿದ್ದಾನೆ. ರೂಪಾಲಿಗೆ ಅರ್ಥವೇ ಆಗುತ್ತಿರಲಿಲ್ಲ. ಇಷ್ಟು ವರ್ಷಗಳ ತನಕ ನನ್ನ ಬಗ್ಗೆ ಆತನಿಗೆ ನೆನಪೇ ಬರಲಿಲ್ಲವೇ? ಆತನಿಂದ ನನಗೆ ಯಾವ ಸುಖವೂ ಸಿಗಲಿಲ್ಲ. ಈಗ ಬರುತ್ತಿದ್ದಾನೆಂದರೆ..!

ಹೇಗಾದರೂ ಆಗಲಿ. ಎಷ್ಟಾದರೂ ಗಂಡ ತಾನೆ...! ಅವನಿಗೆ ಖುಷಿಯಾಗುವುದಿದ್ದರೆ ನನಗೂ ಸಂತೋಷವೇ. ದೂರ ಮಾಡಿದ್ದ ಶರಾಬು ಈಗ ಹತ್ತಿರಕ್ಕೂ ತರಬಹುದಲ್ಲವೆ! ಆತನಿಗೆ ಶರಾಬು ಇಷ್ಟ. ಹಾಗಾಗಿ ಆತನಿಗೆ ನಾನೇ ಇಂದು ಶರಾಬು ಕುಡಿಸುತ್ತೇನೆ.

ಆದರೆ ಶರಾಬನ್ನು ನಾನು ಎಲ್ಲಿಂದ ತರಲಿ? ಪೇಟೆಯಿಂದ ನಾನು ಶರಾಬು ಖರೀದಿಸಿ ತಂದರೆ